# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\3085\2015\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 25/06/2019

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯು: ಸರ್ಕಾರಿ ನೌಕರರಾದ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ತಲಕಾಡು ಗ್ರಾಮ ಪಂಚಾಯತ್‌ನ 1) ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ.ಆರ್.ಮಾದೇಶ, 2) ಹಿಂದಿನ ಅಧ್ಯಕ್ಷರಾದ ಶ್ರೀ.ಚಿಕ್ಕಮಾದ ನಾಯ್ಕ, 3) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ ಸಹಾಯಕ ಅಭಿಯಂತರರಾದ ಶ್ರೀ.ದೇವರಾಜ, ಗ್ರಾಮೀಣ ಕುಡಿಯುವ ನೀರು ಸರಬರಾಜು ಉಪ ವಿಭಾಗದ 4) ಸಹಾಯಕ ಅಭಿಯಂತರರು-2 ಶ್ರೀ.ಎಸ್.ನಾಗರಾಜ ಮತ್ತು 5) ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ ಶ್ರೀ.ಪಿ.ಲಕ್ಷ್ಮಣ ರಾವ್ ರವರ ಕರ್ತವ್ಯ ಲೋಪ ಮತ್ತು ದುರ್ನಡತೆಯ ಬಗ್ಗೆ.

**********

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ತಲಕಾಡು ಹೊಸಬೀದಿ ನಿವಾಸಿಯಾದ ಶ್ರೀ.ಸುಬ್ಬನಾಯ್ಕ ಬಿನ್ ಲೇಟ್.ಜವರಯ್ಯ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ತಲಕಾಡು ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ.ಆರ್.ಮಾದೇಶ (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆಯ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:-

ತಲಕಾಡು ಪಂಚಲಿಂಗ ದರ್ಶನ ಮಹೋತ್ಸವದ ಅಂಗವಾಗಿ 2013-14ನೇ ಸಾಲಿನಲ್ಲಿ ಸರ್ಕಾರವು ನೀಡಿರುವ ವಿಶೇಷ ಅನುದಾನದಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ನಡೆಸದೇ, ಸುಳ್ಳು ಮಾಹಿತಿ ನೀಡಿ, ಹಣ ದುರುಪಯೋಗ ಮಾಡಿಕೊಂಡಿದ್ದಾರೆಂದು ಆಪಾದಿಸಿದ್ದಾರೆ-

804



1) 7ನೇ ಬ್ಲಾಕ್ ಶ್ರೀ.ವೀರೇಶ್ ರವರ ಮನೆಯಿಂದ ಹಸ್ತಿಕೇರಿ ಮಠದವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ;
2) 7ನೇ ಬ್ಲಾಕ್ ಶ್ರೀ.ಮಲ್ಲಿಕಾರ್ಜುನ ರವರ ಮನೆಯಿಂದ ಶ್ರೀ.ರಾಜು ರವರ ಮನೆಯವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ;
3) 7ನೇ ಬ್ಲಾಕ್ ಶ್ರೀ.ಬಟ್ಟಯ್ಯ ರವರ ಮನೆಯಿಂದ ಅಗ್ಗಿಷ್ಟಿಕೆ ದೇವಸ್ಥಾನದವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ;
4) 7ನೇ ಬ್ಲಾಕ್ ಶ್ರೀ.ಸೇಬು ರವರ ಮನೆಯಿಂದ ಅಗ್ಗಿಷ್ಟಿಕೆ ದೇವಸ್ಥಾನದವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ;
5) 6ನೇ ಬ್ಲಾಕ್ ಶ್ರೀ.ಕುಳ್ಳರಸನ ರವರ ಮನೆಯಿಂದ ಶ್ರೀಮತಿ.ರಾಜಮ್ಮ ರವರ ಮನೆಯವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ;

ಮುಂದುವರೆದು, ಈ ಕೆಳಗೆ ಪಟ್ಟಿ ಮಾಡಿರುವ ಆರೋಪಗಳನ್ನು ದೂರುದಾರರು ಮಾಡಿದ್ದಾರೆ –

1) 2014–15ನೇ ಸಾಲಿನಲ್ಲಿ ಪ್ರವಾಸಿ ವಾಹನಗಳ ಮೇಲೆ ಸುಂಕ ವಿಧಿಸುವ ಹರಾಜಿನಲ್ಲಿ ಬಂದ ಸುಮಾರು ₹27 ಲಕ್ಷಗಳಲ್ಲಿ ಯಾವುದೇ ಕಾಮಗಾರಿ ನಡೆಸದೇ, ಹಣ ದುರುಪಯೋಗ ಮಾಡಿಕೊಂಡಿದ್ದಾರೆ;
2) ಸ್ವಜಲ ಧಾರೆ ಖಾತೆಯಿಂದ ಹಣ ಡ್ರಾ ಮಾಡಿದ್ದಾರೆ;
3) 2014–15ನೇ ಸಾಲಿನಲ್ಲಿ ತಲಕಾಡು ಹಳೇಬೀದಿ ರಸ್ತೆ ಅಗಲೀಕರಣದಲ್ಲಿ ನಿರಾಶ್ರಿತರಾದವರಿಗೆಂದು ಮಂಜೂರಾಗಿದ್ದ ಸುಮಾರು 100 ಮನೆಗಳನ್ನು ಸರಿಯಾದ ಫಲಾನುಭವಿಗಳಿಗೆ ತಲುಪಿಸದೇ ಬೇರೆಯವರಿಗೆ ನೀಡಿದ್ದಾರೆ;
4) ಗ್ರಾಮ ಪಂಚಾಯತ್ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವಾಗ ಕಂದಾಯದಿಂದ ಸಂದಾಯವಾದ ಹಣವನ್ನು ಚೆಕ್ ಮುಖಾಂತರ ನೀಡಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷರು ಅನ್ಯಾಯ ಎಸಗಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

4. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಮುಖ್ಯ ಅಭಿಯಂತರರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಆದೇಶಿಸಲಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರ–1 (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

ಅ) 2013ರ ಪಂಚಲಿಂಗ ದರ್ಶನ ಮಹೋತ್ಸವದ ಪ್ರಯುಕ್ತ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರದ ಆದೇಶ ಸಂಖ್ಯೆ:ಕಂಇ 157 ಮುಅಬಿ 2013 ದಿನಾಂಕ:16/11/13ರಲ್ಲಿ ಬಿಡುಗಡೆಯಾಗಿರುವ ₹12 ಕೋಟಿ ಅನುದಾನದಲ್ಲಿ ಶೇ.50ರಷ್ಟನ್ನು ದಿನಾಂಕ:09/12/13ರ ಅಧಿಕೃತ ಜ್ಞಾಪನದಲ್ಲಿ ಮೈಸೂರು ಜಿಲ್ಲಾಧಿಕಾರಿಗಳು ವಿವಿಧ ಇಲಾಖೆಗೆ ಸಂಬಂಧಿಸಿದ ಅನುದಾನವನ್ನು ಬಿಡುಗಡೆಗೊಳಿಸಿರುವ ಪಟ್ಟಿಯ ಕ್ರಮ ಸಂಖ್ಯೆ.10ರಲ್ಲಿ ತಲಕಾಡು ಗ್ರಾಮ ಪಂಚಾಯಿತಿಗೆ ನಿಗದಿಪಡಿಸಿರುವ ₹41 ಲಕ್ಷಗಳ ಅನುದಾನದ

MYS/3085/15

805



ಪೈಕಿ ₹20.50 ಲಕ್ಷಗಳನ್ನು ದಿನಾಂಕ:09/12/13ರಂದು ನಿಬಂಧನೆಗಳಿಗೊಳಪಟ್ಟು ಬಿಡುಗಡೆ ಗೊಳಿಸಿದೆ. ಅಗತ್ಯತೆಗೆ ತಕ್ಕಂತೆ ಗ್ರಾಮ ಪಂಚಾಯತ್‌ನಲ್ಲಿ ₹26 ಲಕ್ಷ ಮತ್ತು ₹15 ಲಕ್ಷಗಳಿಗೆ ಎರಡು ಕ್ರಿಯಾ ಯೋಜನೆಗಳನ್ನು ತಯಾರಿಸಿ, ಅನುಮೋದನೆ ಪಡೆದುಕೊಂಡಿದೆ. ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಹಸ್ತಿಕೇರಿ ಮಠದ ರಸ್ತೆಯ ಎರಡೂ ಬದಿಯಲ್ಲಿ ಅಲ್ಲಲ್ಲಿ ತುಂಡು ತುಂಡಾಗಿ ಚರಂಡಿ ನಿರ್ಮಾಣ ಮಾಡಲು ಅಳವಡಿಸಿಕೊಂಡಿರುವುದು ಅವೈಜ್ಞಾನಿಕವಾಗಿದೆಯೆಂದು ಕಾಮಗಾರಿ ಪ್ರಗತಿಯಲ್ಲಿರುವಾಗ ಪರಿವೀಕ್ಷಣೆಗೆ ಬಂದ ಮೇಲಾಧಿಕಾರಿಗಳು ನೀಡಿದ ಸಲಹೆ–ಸೂಚನೆ ಮೇರೆಗೆ ಹಾಗೂ ಸ್ಥಳೀಯರ ದೂರು ಮತ್ತು ಸಲಹೆಯಂತೆ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಅಧಿಕಾರಿಗಳು ಅನುಮೋದಿತ ಕ್ರಿಯಾ ಯೋಜನೆಯಲ್ಲಿರುವ ಕಾಮಗಾರಿಗಳ ಸ್ಥಳ ಬದಲಾಯಿಸಲು ದಿ:08/11/13ರಂದು ನಡೆದ ಗ್ರಾಮ ಪಂಚಾಯತ್ ವಿಶೇಷ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಿ, ಬದಲಿಕೆಯ ಯೋಜನೆ ರೂಪಿಸಿ, ಕಾರ್ಯನಿರ್ವಾಹಕ ಅಧಿಕಾರಿಗಳು, ಟಿ.ನರಸೀಪುರ ರವರಿಂದ ಕ್ರಿಯಾ ಯೋಜನೆ ಅನುಮೋದಿಸಿಕೊಂಡಿದ್ದಾರೆ. ಸದರಿ ಕ್ರಿಯಾ ಯೋಜನೆಗಳೆಂದರೆ, 1)ಡಿಪೋ ಮಾಸ್ಟರ್ ಮನೆಯಿಂದ ಶ್ರೀಮತಿ.ಬಟ್ಟಮ್ಮ ರವರ ಮನೆಯವರೆಗೆ ಚರಂಡಿ ನಿರ್ಮಾಣ – ಅಂದಾಜು ಮೊತ್ತ ₹75,000/–; 2) ಶ್ರೀಮತಿ.ಬಟ್ಟಮ್ಮ ರವರ ಮನೆಯಿಂದ ಅಗ್ಗಿಷ್ಟಿಕೆ ದೇವಸ್ಥಾನದವರೆಗೆ ಎಡಬದಿಯಲ್ಲಿ ಚರಂಡಿ ನಿರ್ಮಾಣ – ಅಂದಾಜು ಮೊತ್ತ ₹50,000/–; 3)ಶ್ರೀಮತಿ.ಬಂಡರಸಮ್ಮನ ತಮ್ಮಡಪ್ಪ ರವರ ಖಾಲಿ ನಿವೇಶನ ದಿಂದ ಮಣಿ ಮನೆಯವರೆಗೆ ಚರಂಡಿ ನಿರ್ಮಾಣ – ಅಂದಾಜು ಮೊತ್ತ ₹75,000/–: 4)ಶ್ರೀ.ಸಿದ್ದಪ್ಪಾಜಿ ರವರ ಮನೆಯಿಂದ ಶ್ರೀ.ರಾಜು ರವರ ಮನೆಯವರೆಗೆ ಚರಂಡಿ ನಿರ್ಮಾಣ – ಅಂದಾಜು ಮೊತ್ತ ₹70,000/–; 5) ಮಾಸ್ಟರ್ ಆನಂದ ಮನೆಯಿಂದ ಶ್ರೀ.ಸೀನ ರವರ ಮನೆಯವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ – ಅಂದಾಜು ಮೊತ್ತ ₹50,000/–. ಸದರಿ ಕಾಮಗಾರಿಗಳನ್ನು ನಿರ್ವಹಿಸಿರುವುದು ಸ್ಥಳ ತನಿಖೆಯಲ್ಲಿ ಕಂಡು ಬಂದಿದೆ;

ಆ) 2014–15ನೇ ಸಾಲಿನ ಪ್ರವಾಸಿ ವಾಹನಗಳ ಮೇಲೆ ಸುಂಕ ವಿಧಿಸುವ ಬಗ್ಗೆ ದಿ:30/05/14 ರಂದು ಬಹಿರಂಗ ಹರಾಜು ಪ್ರಕ್ರಿಯೆ ನಡೆಸಿ, ಭಾಗವಹಿಸಿದ ಬಿಡ್‌ದಾರರ ಪೈಕಿ ಶ್ರೀ.ಟಿ.ಸಿ.ಚಾಮನಾಯಕ ಬಿನ್ ಲೇ.ಚಾಮಯ್ಯ ರವರು ₹15.99 ಲಕ್ಷಗಳಿಗೆ ಬಿಡ್ ಮಾಡಿ, ಯಶಸ್ವಿ ಬಿಡ್‌ದಾರರಾಗಿದ್ದು, ಸದರಿಯವರು ದಿ:31/05/14 ಮತ್ತು 30/06/14ರಂದು ಬಿಡ್ ಹಣವನ್ನು ಪಂಚಾಯತ್ ಖಾತೆಗೆ ಜಮಾ ಮಾಡಿದ್ದಾರೆ. ಸದರಿ ಹಣವನ್ನು ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿದಂತೆ ಪಂಚಾಯತ್‌ನ ಅಗತ್ಯ ಕೆಲಸಗಳಿಗೆ ನಿಯಮಗಳನ್ವಯ ವಿನಿಯೋಗಿಸಿರುವುದು ಕಂಡು ಬಂದಿದೆ;

ಇ) ಸ್ವಜಲ ಧಾರೆ ಖಾತೆಯಲ್ಲಿ ಇರುವ ಹಣವನ್ನು ಪೈಪ್‌ಲೈನ್ ಕಾಮಗಾರಿಗಳು, ಪೈಪ್‌ಲೈನ್ ದುರಸ್ತಿ ಮತ್ತು ಬೋರ್‌ವೆಲ್ ದುರಸ್ತಿ ಕೆಲಸಗಳಿಗೆ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದಿಸಿದಂತೆ ಸದರಿ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಿರುವುದು ಕಂಡು ಬಂದಿದೆ;

ಈ) 2014–15ನೇ ಸಾಲಿನಲ್ಲಿ ಪಂಚಾಯತ್ ಠರಾವು ದಿನಾಂಕ:22/07/14ರಲ್ಲಿನ ನಿರ್ಣಯದಂತೆ ಬಸವ ವಸತಿ ಯೋಜನೆ ಅಡಿ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದೆ. ಆದ್ದರಿಂದ, ದೂರುದಾರರು ಮಾಡಿರುವ ಎಲ್ಲಾ ಆರೋಪಗಳು ಸಾಭೀತಾಗಿಲ್ಲ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ.

806



5. ತನಿಖಾಧಿಕಾರಿಗಳ ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಸದರಿಯವರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

6. ತಲಕಾಡು ಗ್ರಾಮ ಪಂಚಾಯತ್‌ನ ಅಂದಿನ ಅಧ್ಯಕ್ಷರಾದ ಶ್ರೀ.ಚಿಕ್ಕಮಾದಾ ನಾಯ್ಕ ಹಾಗೂ ಶ್ರೀ.ದೇವರಾಜ್, ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಶ್ರೀ.ಎಸ್.ನಾಗರಾಜ, ಸಹಾಯಕ ಅಭಿಯಂತರರು-2 ಮತ್ತು ಶ್ರೀ.ಪಿ.ಲಕ್ಷ್ಮಣರಾವ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರ್‌ಡಬ್ಲ್ಯೂಎಸ್‌ಎಸ್ ಉಪ ವಿಭಾಗ, ಟಿ.ನರಸೀಪುರ ರವರುಗಳನ್ನು 2 ರಿಂದ 5ನೇ ಹೆಚ್ಚುವರಿ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಗಳನ್ನು ಕೇಳಲಾಯಿತು.

7. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ದೂರಿಗೆ ಸಂಬಂಧಿಸಿದಂತೆ, ಈಗಾಗಲೇ ದಿ:03/12/16ರಂದು ವಿಚಾರಣಾಧಿಕಾರಿಗಳು, ತಲಕಾಡು ಗ್ರಾಮ ಪಂಚಾಯತ್‌ಗೆ ಭೇಟಿ ನೀಡಿ, ದಾಖಲೆಗಳು ಹಾಗೂ ಕಾಮಗಾರಿಗಳ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಸಂಪೂರ್ಣವಾದ ಸಹಕಾರ ಮತ್ತು ಮಾಹಿತಿಯನ್ನು ಒದಗಿಸಿದೆಯೆಂದು ಹೇಳಿದ್ದಾರೆ.

8. ಮೂರು (3) ಮತ್ತು 4ನೇ ಎದುರುದಾರರುಗಳು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

9. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಲಕಾಡು ಗ್ರಾಮ ಪಂಚಾಯತ್‌ನ ಮಾಸಿಕ ಸಭೆಯಲ್ಲಿ ಕ್ರಿಯಾ ಯೋಜನೆ ತಯಾರಿಸಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ಟಿ.ನರಸೀಪುರ ರವರಿಂದ ಕ್ರಿಯಾ ಯೋಜನೆ ಅನುಮೋದನೆ ಪಡೆದುಕೊಂಡು ಸರ್ಕಾರದಿಂದ ಅನುದಾನ ಪಡೆದು ಕಾಮಗಾರಿ ನಿರ್ವಹಿಸಿದೆ. ತಲಕಾಡು ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಗಳ ಕೋರಿಕೆಯಂತೆ 2013-14ನೇ ಸಾಲಿನಲ್ಲಿ ಕಿರಿಯ ಅಭಿಯಂತರರ ಉಸ್ತುವಾರಿಯಲ್ಲಿ ತಲಕಾಡು ಗ್ರಾಮದ 5 ಕಾಮಗಾರಿಗಳನ್ನು ನಿರ್ವಹಿಸಿ, ಅಳತೆ ಪುಸ್ತಕದಲ್ಲಿ ದಾಖಲಿಸಿ, ಸಹಿ ಮಾಡಿ, ಪಂಚಾಯತ್‌ಗೆ ಸಲ್ಲಿಸಿದ್ದಾರೆ. ಸದರಿ ಬಿಲ್ಲುಗಳಿಗೆ ತಲಕಾಡು ಗ್ರಾಮ ಪಂಚಾಯತ್‌ನ ಅಧ್ಯಕ್ಷರು ಮತ್ತು ಅಭಿವೃದ್ಧಿ ಅಧಿಕಾರಿಗಳು ಸಹಿ ಮಾಡಿದ್ದಾರೆ. ಸದರಿ

mys/30857/15

(827)



ಕಾಮಗಾರಿಗಳ ಮೇಲ್ವಿಚಾರಣೆಯನ್ನು ತಾವು ಮಾಡಿಲ್ಲ ಹಾಗೂ ಬಿಲ್ಲುಗಳಿಗೂ ಸಹ ತಾವು ಸಹಿ ಮಾಡಿಲ್ಲವೆಂದು ಹೇಳಿದ್ದಾರೆ.

10. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಟಿ.ನರಸೀಪುರ ತಾಲ್ಲೂಕ್ ತಲಕಾಡು ಗ್ರಾಮದಲ್ಲಿ ಜರುಗಿದ ಪಂಚಲಿಂಗ ದರ್ಶನ ಮಹೋತ್ಸವದ ಪ್ರಯುಕ್ತ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರದಿಂದ ಬಿಡುಗಡೆಯಾದ ಹಣದ ಪೈಕಿ ₹41 ಲಕ್ಷಗಳ ಅನುದಾನ ತಲಕಾಡು ಗ್ರಾಮ ಪಂಚಾಯತ್‌ಗೆ ಮಂಜೂರಾಗಿದೆ. ಅದರ ಪೈಕಿ ₹20,50,000/-ಗಳನ್ನು ಮೈಸೂರು ಜಿಲ್ಲಾಧಿಕಾರಿಗಳು ಬಿಡುಗಡೆಗೊಳಿಸಿ ದಿನಾಂಕ:09/12/13ರಂದು ಆದೇಶ ಸಂಖ್ಯೆ:ಡಿವಿಎಸ್-1\ಪಂಚಲಿಂಗ\ಸಿಆರ್ 86\13-14 ಅನ್ನು ಹೊರಡಿಸಿದ್ದಾರೆ. ಸದರಿ ಆದೇಶದ ನಿಬಂಧನೆಗಳನ್ವಯ –

ಅ) ಪಂಚಲಿಂಗ ದರ್ಶನ ಕಾರ್ಯಕ್ರಮಗಳಿಗೆ ಮಾತ್ರ ಹಣವನ್ನು ಬಳಸಬೇಕು;
ಆ) ಕರ್ನಾಟಕ ಆರ್ಥಿಕ ಸಂಹಿತೆಯ ಪರಿಚ್ಛೇದ 15, 16 & 17ನ್ನು ಅನುಸರಿಸಬೇಕು;
ಇ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಹಾಗೂ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿದೆ;

2) ಅದರಂತೆ ತಲಕಾಡು ಗ್ರಾಮ ಪಂಚಾಯತ್‌ನಲ್ಲಿ ₹26 ಲಕ್ಷ ಮತ್ತು ₹15 ಲಕ್ಷಗಳಿಗೆ ಎರಡು ಕ್ರಿಯಾ ಯೋಜನೆಯನ್ನು ತಯಾರಿಸಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ಟಿ.ನರಸೀಪುರ ರವರಿಂದ ಅನುಮೋದನೆಯನ್ನು ಪಡೆದಿರುವುದು ದಾಖಲೆಯಿಂದ ಕಂಡು ಬಂದಿದೆ;

3) ₹26 ಲಕ್ಷಗಳ ಕ್ರಿಯಾ ಯೋಜನೆಯಲ್ಲಿ ಒಟ್ಟು 42 ಕಾಮಗಾರಿಗಳು ಹಾಗೂ ₹15 ಲಕ್ಷಗಳ ಕ್ರಿಯಾ ಯೋಜನೆಯಲ್ಲಿ 25 ಕಾಮಗಾರಿಗಳನ್ನು ಹೆಸರಿಸಿದ್ದು, ಅವುಗಳ ಪೈಕಿ ದೂರಿಗೆ ಸಂಬಂಧಿಸಿದಂತೆ ದೂರಿನಲ್ಲಿ ಆಪಾದಿಸಿದ ಮೊದಲ 5 ಕಾಮಗಾರಿಗಳ ಪೈಕಿ 4 ಮತ್ತು 5ನೇ ಕಾಮಗಾರಿಗಳು (7ನೇ ಬ್ಲಾಕ್ ಶ್ರೀ.ಸೇಬು ರವರ ಮನೆಯಿಂದ ಅಗ್ಗಿಷ್ಟಿಕೆ ದೇವಸ್ಥಾನದವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ ಮತ್ತು 6ನೇ ಬ್ಲಾಕ್ ಶ್ರೀ.ಕುಳ್ಳರಸನ ರವರ ಮನೆಯಿಂದ ಶ್ರೀಮತಿ.ರಾಜಮ್ಮ ರವರ ಮನೆಯವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ) ಸೇರ್ಪಡೆಯಾಗದೇ ಇರುವುದು ಕಂಡು ಬಂದಿದೆ. ಉಳಿದಂತೆ ಅನುಮೋದನೆಗೊಂಡ ಕಾಮಗಾರಿಗಳ ಪೈಕಿ ಕೆಲವೊಂದು ಕಾಮಗಾರಿಗಳ ಸ್ಥಳ ಬದಲಾಯಿಸಲು ದಿ:08/11/13ರಂದು ನಡೆದ ವಿಶೇಷ ಗ್ರಾಮ ಪಂಚಾಯತ್ ಸಭೆಯಲ್ಲಿ ಬದಲೀ ಕ್ರಿಯಾ ಯೋಜನೆ ರೂಪಿಸಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ಟಿ.ನರಸೀಪುರ ರವರಿಂದ ದಿ:14/02/14ರಂದು ಅನುಮೋದನೆಯನ್ನು ಪಡೆದಿರುವುದು ಕಂಡು ಬಂದಿದೆ. ಸದರಿ ಬದಲಾವಣೆ ಕಾಮಗಾರಿಯ ವಿವರ ಈ ಕೆಳಗಿನಂತಿದೆ –

| ಕ್ರ. ಸಂ. | ಅನುಮೋದನೆಗೊಂಡಿದ್ದ ಕಾಮಗಾರಿಗಳ ವಿವರ | ಬದಲಾವಣೆ ಕಾಮಗಾರಿಗಳ ವಿವರ | ನಿಗದಿಪಡಿಸಿದ ಮೊತ್ತ |
|---|---|---|---|
| 1 | ಶ್ರೀ.ವೀರೇಶ್ ರವರ ಮನೆಯಿಂದ ಹಸ್ಸಿಕೇರಿ ಮಠದವರೆಗೆ ಬಾಕ್ಸ್ | ಡಿಪೋ ಮಾಸ್ಟರ್ ಮನೆಯ ಪಕ್ಕದಿದ್ದ ಶ್ರೀಮತಿ.ಬಟ್ಟಮ್ಮ ರವರ | ₹75,000/- |

808



| | | | |
|---|---|---|---|
| | ಒಳಚರಂಡಿ ನಿರ್ಮಾಣ | ಮನೆಯವರೆಗೆ ಚರಂಡಿ ನಿರ್ಮಾಣ | |
| 2 | ಶ್ರೀಮತಿ.ಬಟ್ಟಮ್ಮ ರವರ ಮನೆಯಿಂದ ಅಗ್ಗಿಷ್ಟಿಕೆ ದೇವಸ್ಥಾನದವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ; | ಶ್ರೀಮತಿ.ಬಟ್ಟಮ್ಮ ರವರ ಮನೆಯಿಂದ ಅಗ್ಗಿಷ್ಟಿಕೆ ದೇವಸ್ಥಾನದವರೆಗೆ ಎಡಬದಿ ಯಲ್ಲಿ ಚರಂಡಿ ನಿರ್ಮಾಣ | ₹50,000/- |
| 3 | ಅಗ್ಗಿಷ್ಟಿಕೆ ದೇವಸ್ಥಾನದಿಂದ ಶ್ರೀ.ಟ್ರ್ಯಾಕ್ಟರ್ ರಾಜು ರವರ ಮನೆಯವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ | ಶ್ರೀಮತಿ.ಬಂಡರಸಮ್ಮನ ತಮ್ಮಡಪ್ಪ ರವರ ಖಾಲಿ ನಿವೇಶನ ದಿಂದ ಮಣಿ ಮನೆ ಯವರೆಗೆ ಚರಂಡಿ ನಿರ್ಮಾಣ | ₹75,000/- |
| 4 | ಶ್ರೀ.ಟ್ರ್ಯಾಕ್ಟರ್ ರಾಜು ರವರ ಮನೆಯಿಂದ ಶ್ರೀ.ಮಲ್ಲಿಕಾರ್ಜುನ ರವರ ಮನೆಯವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ | ಶ್ರೀ.ಸಿದ್ದಪ್ಪಾಜಿ ರವರ ಮನೆಯಿಂದ ಶ್ರೀ.ರಾಜು ರವರ ಮನೆಯವರೆಗೆ ಚರಂಡಿ ನಿರ್ಮಾಣ | ₹70,000/- |
| 5 | ಶ್ರೀ.ಕುಳ್ಳರಸನ ರವರ ಮನೆಯಿಂದ ಶ್ರೀಮತಿ.ರಾಜಮ್ಮ ರವರ ಮನೆಯವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | ಮಾಸ್ಟರ್ ಆನಂದ ಮನೆಯಿಂದ ಶ್ರೀ.ಸೀನ ರವರ ಮನೆಯವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | ₹50,000/- |

4) ಸದರಿ ಕಾಮಗಾರಿಗಳನ್ನು ಶ್ರೀ.ಟಿ.ವಿ.ರಮೇಶ್, 3ನೇ ದರ್ಜೆ ಗುತ್ತಿಗೆದಾರರು, ಟಿ.ನರಸೀಪುರ ರವರಿಗೆ ಬೇರೆ ಬೇರೆ ತುಂಡು ಗುತ್ತಿಗೆ ಕರಾರುಗಳಡಿಯಲ್ಲಿ 1 ಮತ್ತು 2ನೇ ಎದುರುದಾರರು ನೀಡಿರುವುದು ಕಂಡು ಬಂದಿದೆ. ಕಾಮಗಾರಿಗಳ ಬದಲಾವಣೆಗೆ ಕಾರ್ಯನಿರ್ವಾಹಕ ಅಧಿಕಾರಿಯವರ ಅನುಮೋದನೆ ಪಡೆದಿದ್ದರೂ ಗುತ್ತಿಗೆದಾರರೊಂದಿಗೆ ಮಾಡಿಕೊಂಡಿರುವ ಕರಾರುಗಳು, ಗುತ್ತಿಗೆದಾರರಿಗೆ ಸಂದಾಯ ಮಾಡುವ ಬಿಲ್ಲುಗಳಲ್ಲಿ ಮತ್ತು ಕಾಮಗಾರಿ ವಹಿಸಿದ ದಾಖಲೆಗಳಲ್ಲಿ ಕಂಡು ಬರುವ ಪ್ರಕಾರ ಮೊದಲು ಅನುಮೋದನೆಗೊಂಡ ಕಾಮಗಾರಿಗಳನ್ನು ನಿರ್ವಹಿಸಿರುವುದು ಕಂಡು ಬಂದಿದೆ. ಕಾರಣ, ಬದಲೀ ಕ್ರಿಯಾ ಯೋಜನೆಯಂತೆ ಕಾಮಗಾರಿಗಳನ್ನು ನಿರ್ವಹಿಸದೇ ಗುತ್ತಿಗೆದಾರರಿಗೆ ಹಣ ಸಂದಾಯ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

5) ಕಡತದನ್ವಯ –

| ಕ್ರ. ಸಂ. | ಅನುಮೋದನೆಗೊಂಡಿದ್ದ ಕಾಮಗಾರಿಗಳ ವಿವರ | ಪರಿವೀಕ್ಷಣೆ ಮಾಡಿದ ಮತ್ತು ಅಂತಿಮ ಅಳತೆ ಮಾಡಿದ ಅಭಿಯಂತರರ ವಿವರ |
|---|---|---|
| 1 | ಶ್ರೀ.ವೀರೇಶ್ ರವರ ಮನೆಯಿಂದ ಹಸ್ಕೇರಿ ಮಠದವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ | 4 ಮತ್ತು 5ನೇ ಎದುರುದಾರರು |

mys/3085/15

(809)



| | | |
|---|---|---|
| 2 | ಶ್ರೀಮತಿ.ಬಟ್ಟಮ್ಮ ರವರ ಮನೆಯಿಂದ ಅಗ್ಗಿಷ್ಟಿಕೆ ದೇವಸ್ಥಾನದವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ; | –"– |
| 3 | ಅಗ್ಗಿಷ್ಟಿಕೆ ದೇವಸ್ಥಾನದಿಂದ ಶ್ರೀ.ಟ್ರ್ಯಾಕ್ಟರ್ ರಾಜು ರವರ ಮನೆಯವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ | –"– |
| 4 | ಶ್ರೀ.ಟ್ರ್ಯಾಕ್ಟರ್ ರಾಜು ರವರ ಮನೆಯಿಂದ ಶ್ರೀ.ಮಲ್ಲಿಕಾರ್ಜುನ ರವರ ಮನೆಯವರೆಗೆ ಬಾಕ್ಸ್ ಒಳಚರಂಡಿ ನಿರ್ಮಾಣ | –"– |
| 5 | ಶ್ರೀ.ಕುಳ್ಳರಸನ ರವರ ಮನೆಯಿಂದ ಶ್ರೀಮತಿ.ರಾಜಮ್ಮ ರವರ ಮನೆಯವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | –"– |

6) The Karnataka Panchayath Raj (Gram Panchayaths Budgeting & Accounting) Rules, 2006ರ ನಿಯಮ 83ರನ್ವಯ ಪಂಚಾಯತ್ ಕಾರ್ಯದರ್ಶಿಯು ನಮೂನೆ-36ರಲ್ಲಿ ಕಾರ್ಯಾದೇಶವನ್ನು ನೀಡದ ಹೊರತು ಪಂಚಾಯತ್ ವ್ಯಾಪ್ತಿಯಲ್ಲಿ ಪಂಚಾಯತ್ ವತಿಯಿಂದ ಯಾವುದೇ ಅಭಿವೃದ್ಧಿ ಕಾರ್ಯವನ್ನು ಪ್ರಾರಂಭಿಸತಕ್ಕದ್ದಲ್ಲ. ಮೇಲೆ ಹೇಳಿದ ಕಾಮಗಾರಿಗಳಿಗೆ ಪಂಚಾಯತ್ ಕಾರ್ಯದರ್ಶಿ \ ಅಭಿವೃದ್ಧಿ ಅಧಿಕಾರಿಗಳು ನಿಗಧಿತ ನಮೂನೆಯಲ್ಲಿ ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ನೀಡಿದ ದಾಖಲೆಗಳಿಲ್ಲ;

7) The Karnataka Panchayath Raj (Gram Panchayaths Budgeting & Accounting) Rules, 2006ರ ನಿಯಮ 83ರನ್ವಯ ಪಂಚಾಯತ್ ವ್ಯಾಪ್ತಿಯಲ್ಲಿ ಪಂಚಾಯತ್ ವತಿಯಿಂದ ನಿರ್ವಹಿಸಲ್ಪಡುವ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ನಮೂನೆ-37ರಲ್ಲಿ ಅಳತೆ ವಹಿ ನಿರ್ವಹಿಸತಕ್ಕದ್ದು. ಮೇಲೆ ಹೇಳಿದ ಕಾಮಗಾರಿಗಳ ಅಳತೆಯನ್ನು 4ನೇ ಎದುರುದಾರರು ಅಳತೆ ವಹಿಯಲ್ಲಿ ದಾಖಲಿಸಿದ್ದಾರೆ. 5ನೇ ಎದುರುದಾರರು ಸದರಿ ಅಳತೆಯನ್ನು ಪರಿಶೀಲಿಸಿರುವುದು ಕಾಮಗಾರಿಯ ಮುಕ್ತಾಯದ ವರದಿಯಲ್ಲಿ ಕಂಡು ಬಂದಿದೆ. ಮೇಲೆ ಹೇಳಿದ 5 ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ-5ನೇ ಕಾಮಗಾರಿಯ ಅಳತೆ ದಾಖಲಿಸಿದ ದಿನಾಂಕವನ್ನು 4ನೇ ಎದುರುದಾರರು ಅಳತೆ ಪುಸ್ತಕದಲ್ಲಿ ನಮೂದಿಸದೇ ಇರುವುದು ಕಂಡು ಬಂದಿದೆ. ಉಳಿದ 4 ಕಾಮಗಾರಿಗಳ ಅಳತೆಯನ್ನು 4ನೇ ಎದುರುದಾರರು ಒಂದೇ ದಿನಾಂಕದಂದು ಅಂದರೆ, ದಿ:27/07/14ರಂದೇ ದಾಖಲಿಸಿದ್ದಾರೆ. ಮೇಲೆ ಹೇಳಿದ 5 ಕಾಮಗಾರಿಗಳು ಮಾತ್ರವಲ್ಲದೇ, ಬೇರೆ ಕಾಮಗಾರಿಗಳಿಗೆ ಸಂಬಂಧಿಸಿದ ಅಳತೆ ಪುಸ್ತಕದಲ್ಲಿ ಸದರಿ ಕಾಮಗಾರಿಗಳ ಅಳತೆಯನ್ನು ಸಹ (ಚಾಮುಂಡೇಶ್ವರಿ ದೇವಸ್ಥಾನದ ಪಕ್ಕದ ರಸ್ತೆ ಅಭಿವೃದ್ಧಿ ಕಾಮಗಾರಿ ಹೊರತುಪಡಿಸಿ) 4ನೇ ಎದುರುದಾರರು ದಿ:27/07/14ರಂದೇ ದಾಖಲಿಸಿರುವುದು ಕಂಡು ಬಂದಿದೆ. 4ನೇ ಎದುರುದಾರರು ನಿಯಮ 85ರನ್ವಯ ಅಳತೆ ವಹಿಯನ್ನು ನಿರ್ವಹಿಸದೇ ಇರುವುದು ಕಂಡು ಬಂದಿದೆ;

8) ನಿಯಮ 86ರನ್ವಯ ₹25,000/- ಕ್ಕಿಂತ ಮೇಲೆ ₹4 ಲಕ್ಷಕ್ಕಿಂತ ಕೆಳಗಿನ ಅಂದಾಜಿನ ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಪಡೆದುಕೊಳ್ಳುವ ಜವಾಬ್ದಾರಿ ಪಂಚಾಯತ್‌ನ ಅಧ್ಯಕ್ಷರು ಮತ್ತು ಜಿಲ್ಲಾ

೩೧೦



ಪಂಚಾಯತ್‌ನ ಇಂಜಿನಿಯರಿಂಗ್ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರದ್ದಾಗಿದೆ. Booklet-1Aರಲ್ಲಿರುವ ಕಾಮಗಾರಿ ಮುಕ್ತಾಯದ ವರದಿಗಳಲ್ಲಿ ಕಂಡು ಬರುವಂತೆ 5ನೇ ಎದುರುದಾರರು ಮಾತ್ರ ಮೇಲೆ ಹೇಳಿದ ಕಾಮಗಾರಿಗಳ ಚೆಕ್ ಮೆಷರ್‌ಮೆಂಟನ್ನು ಮಾಡಿದ್ದಾರೆ. ಆದರೆ, ಸದರಿಯವರೇ ಚೆಕ್ ಮೆಷರ್‌ಮೆಂಟನ್ನು ಮಾಡಿದ್ದಾರೆಂಬ ಅಂಶ ಅಳತೆ ವಹಿಯಲ್ಲಿ ಕಂಡು ಬಂದಿಲ್ಲ. ಬಿಲ್ಲುಗಳಲ್ಲಿ ಗುತ್ತಿಗೆದಾರರು ಹಾಗೂ 4ನೇ ಎದುರುದಾರರ ಸಹಿಯಿದ್ದು, 5ನೇ ಎದುರುದಾರರು ಚೆಕ್ ಮೆಷರ್‌ಮೆಂಟ್ ಮಾಡಿ, ಅಳತೆ ಸರಿಯಾಗಿದೆಯೆಂದು 5ನೇ ಎದುರುದಾರರು ದೃಢೀಕರಿಸಿಲ್ಲ. ಮುಂದುವರೆದು, ಗುತ್ತಿಗೆದಾರರ ಸ್ವೀಕೃತಿ ಅಳತೆ ಪುಸ್ತಕದಲ್ಲಿ ಕಂಡು ಬಂದಿಲ್ಲ;

9) ಎರಡನೇ (2ನೇ) ಎದುರುದಾರರು ಪಂಚಾಯತ್‌ನ ಅಧ್ಯಕ್ಷರಾಗಿದ್ದು, ಸದರಿಯವರು ನಿಯಮ 86ರನ್ವಯ ಕಾಮಗಾರಿಗಳ ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ಮುಂದುವರೆದು, ಕಾಮಗಾರಿ ಪ್ರಾರಂಭಿಸುವ ಮುನ್ನ, ಕಾಮಗಾರಿ ಪ್ರಗತಿಯಲ್ಲಿರುವಾಗ ಮತ್ತು ಕಾಮಗಾರಿ ಮುಕ್ತಾಯಗೊಂಡ ನಂತರ ಭಾವಚಿತ್ರಗಳನ್ನು ತೆಗೆದ ಬಗ್ಗೆ ದಾಖಲೆಗಳಿಲ್ಲ. ಸದರಿ ಕಾಮಗಾರಿಗಳನ್ನು ನಿರ್ವಹಿಸಿದ ಬಾಬ್ತು ಗುತ್ತಿಗೆದಾರರಿಗೆ ಚೆಕ್ ಸಂಖ್ಯೆ:248976, 248977, 248978, 248979 ದಿ:12/08/14 ಮತ್ತು 043003 ದಿ:13/04/15ರಲ್ಲಿ ಒಟ್ಟು ₹3,00,286/-ಗಳನ್ನು ಸಂದಾಯ ಮಾಡಿದೆ. ಸದರಿ ಬಿಲ್ಲುಗಳಿಗೆ 1 ಮತ್ತು 2ನೇ ಎದುರುದಾರರು ಸಹಿ ಮಾಡಿದ್ದಾರೆ. ಕಾರಣ, ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ ಗುತ್ತಿಗೆದಾರರಿಗೆ ಬಿಲ್ಲಿನ ಮೊತ್ತವನ್ನು ನೀಡಿ, 1ನೇ ಎದುರುದಾರರೂ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಕಾಮಗಾರಿಯ ನಿರ್ವಹಣೆ, ಅಳತೆಯನ್ನು ದಾಖಲಿಸುವಲ್ಲಿ ಮತ್ತು ಚೆಕ್ ಮೆಷರ್‌ಮೆಂಟ್ ಮಾಡುವಲ್ಲಿ 2, 4 ಮತ್ತು 5ನೇ ಎದುರುದಾರರುಗಳು ಮೇಲೆ ಹೇಳಿದ ನಿಯಮ ಪಾಲನೆ ಮಾಡದೇ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ;

10) ತಲಕಾಡು ಗ್ರಾಮದಲ್ಲಿ 2014-15ನೇ ಸಾಲಿಗೆ (01/06/14 ರಿಂದ 31/03/15) ಪ್ರವಾಸಿ ವಾಹನಗಳ ಮೇಲೆ ಸುಂಕ ವಿಧಿಸುವ ಬಹಿರಂಗ ಹರಾಜು ಪ್ರಕ್ರಿಯೆ ದಿನಾಂಕ:30/05/14ರಂದು ಬೆಳಿಗ್ಗೆ 11.30ಕ್ಕೆ ನಿಗಧಿಪಡಿಸಿ, ದಿನಾಂಕ:24/05/14ರಂದು ತಲಕಾಡು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಪ್ರಕಟಣೆಯನ್ನು ಹೊರಡಿಸಿದ್ದಾರೆ. ದಿನಪತ್ರಿಕೆಯಲ್ಲಿ ಟೆಂಡರ್ ಜಾಹೀರಾತು ನೀಡಿದ ಬಾಬ್ತು ₹20,686/- [ದಿ:12/06/14 ಚೆಕ್ ಸಂಖ್ಯೆ:895173 - ₹10,200/- ಮತ್ತು ದಿ:06/06/14 ಚೆಕ್ ಸಂಖ್ಯೆ:895174 - ₹10,486/-] ಖರ್ಚಾಗಿದೆಯೆಂದು ಡಿಸಿ ಬಿಲ್‌ಗಳ ಮುಖೇನ ಹಣ ವ್ಯಯಿಸಿರುವುದು ಕಂಡು ಬಂದಿದೆ. ಚೆಕ್ ಸಂಖ್ಯೆ:895174ನ್ನು ವಿಆರ್‌ಎಲ್ ಮೀಡಿಯಾ ಲಿ., ರವರ ಹೆಸರಿನಲ್ಲಿ ನೀಡಿದ್ದು, ಚೆಕ್ ಸಂಖ್ಯೆ:895173ನ್ನು ಲೋಕ ಶಿಕ್ಷಣ ಟ್ರಸ್ಟ್ ರವರ ಹೆಸರಿಗೆ ನೀಡಿದೆ. ಸದರಿ ಖರ್ಚುಗಳಿಗೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಕೊಟೇಷನ್ ಕರೆದ ದಾಖಲೆಗಳಿಲ್ಲ. ಕಾರಣ, ಸದರಿ ಖರ್ಚು ನಿಯಮಬಾಹಿರವಾಗಿದೆ. ಸದರಿ ಮೊತ್ತಕ್ಕೆ 1 ಮತ್ತು 2ನೇ ಎದುರುದಾರರು ಜವಾಬ್ದಾರರಾಗಿದ್ದಾರೆ;

11) ಪ್ರವಾಸಿ ವಾಹನಗಳ ನಿಲುಗಡೆ ಹರಾಜು ಪ್ರಕ್ರಿಯೆಯಲ್ಲಿ ಶ್ರೀ.ಚಾಮನಾಯಕ ಬಿನ್ ಲೇ.ಚಾಮಯ್ಯ ರವರು ₹15.99 ಲಕ್ಷಕ್ಕೆ ಬಿಡ್ ಮಾಡಿ ಯಶಸ್ವೀ ಬಿಡ್‌ದಾರರೆಂದು ಪರಿಗಣಿಸಿರುವುದು ಕಂಡು ಬಂದಿದೆ. ಸದರಿ ಗುತ್ತಿಗೆದಾರರು ದಿನಾಂಕ:31/05/14 ಮತ್ತು 30/06/14 ರಂದು ಕ್ರಮವಾಗಿ, ₹5,50,000/- ಮತ್ತು ₹10,49,000/-ವನ್ನು ಪಂಚಾಯತ್ ಖಾತೆಗೆ ಜಮಾ ಮಾಡಿದ್ದಾರೆಂದು ತಲಕಾಡು ಗ್ರಾಮ ಪಂಚಾಯತ್ ಕೋಟಕ್ ಮಹೀಂದ್ರಾ ಬ್ಯಾಂಕ್, ತಲಕಾಡು ಶಾಖೆಯ ಖಾತೆ ಸಂಖ್ಯೆ:124010029394ರಲ್ಲಿ ಕಂಡು ಬಂದಿದೆ. ಸದರಿ ಎರಡು ದಿನಾಂಕಗಳಂದು ಹಣವನ್ನು ನಗದು ರೂಪದಲ್ಲಿ ಜಮಾ

mys/3085/15

811



ಮಾಡಿರುವುದರಿಂದ, ಆ ಹಣವನ್ನು ಶ್ರೀ.ಚಾಮನಾಯಕ ಬಿನ್ ಲೇ.ಚಾಮಯ್ಯ ರವರೇ ಜಮಾ ಮಾಡಿದ್ದಾರೆಂದು ಹೇಳಲಾಗುವುದಿಲ್ಲ. ಸದರಿ ಪ್ರವಾಸಿ ವಾಹನಗಳ ನಿಲುಗಡೆಗೆ ಸಂಬಂಧಿಸಿದಂತೆ ಕೆಟಿಪಿಪಿ ಕಾಯಿದೆ ಅನ್ವಯ ಟೆಂಡರ್ ಆಹ್ವಾನಿಸದೇ ಹರಾಜು ಪ್ರಕ್ರಿಯೆಯ ಮೂಲಕ ವಾಹನಗಳ ನಿಲುಗಡೆ ಗುತ್ತಿಗೆಯನ್ನು ನೀಡಿರುವುದು ಕಂಡು ಬಂದಿದೆ;

12) ಕಡತದಲ್ಲಿನ Booklet-2ರನ್ವಯ ಮೇಲೆ ಹೇಳಿದ ಖಾತೆಗೆ ಸಂಬಂಧಿಸಿದಂತೆ ಹಣವನ್ನು ಹಲವಾರು ಚೆಕ್‌ಗಳ ಮುಖೇನ ವ್ಯಯಿಸಿರುವುದು ಕಂಡು ಬಂದಿದ್ದು, ಸದರಿ ಚೆಕ್‌ಗಳನ್ನು ಖಾಸಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳ ಹೆಸರಿಗೆ ನೀಡಿರುವುದು ಕಂಡು ಬಂದಿದೆ. ಬೇರೆ ಬೇರೆ ಸಂಸ್ಥೆಗಳಿಂದ ಸಾಮಗ್ರಿಗಳನ್ನು ಖರೀದಿ ಮಾಡಿದ ಬಾಬ್ತು ರಸೀದಿಗಳು Booklet-2ರಲ್ಲಿದ್ದು, ಸದರಿ ರಸೀದಿಗಳ ವಿವರ ಮತ್ತು ಮೊತ್ತ ಈ ಕೆಳಗಿನಂತಿದೆ –

| ಕ್ರ.ಸಂ. | ಸಂಸ್ಥೆಯ ಹೆಸರು | ಬಿಲ್ ಸಂಖ್ಯೆ & ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | ಶ್ರೀ ಬಾಲಾಜಿ ಸ್ವೀಟ್ಸ್ ಮತ್ತು ಬೇಕರಿ (ಪುಟ ಸಂಖ್ಯೆ:30) | 1917, 14/08/14 | 10500.00 |
| 2 | ಶ್ರೀನಿಧಿ ಎಂಟರ್‌ಪ್ರೈಸಸ್ (ಪುಟ ಸಂಖ್ಯೆ:30) | --, 14/08/14 | 8700.00 |
| 3 | ಇ-ಗ್ರಾಮ ಕೇಂದ್ರ (ಪುಟ ಸಂಖ್ಯೆ:30) | 162, -- | 4996.00 |
| 4 | ಶ್ರೀ ಪಾರ್ವತಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:33) | 200, 14/07/14 | 35438.00 |
| 5 | ಮೇಘ ಡಿಜಿಟಲ್ ಸ್ಟುಡಿಯೋ (ಪುಟ ಸಂಖ್ಯೆ:34) | 5733, -- | 545.00 |
| 6 | ಕೃಷ್ಣ ಏಜೆನ್ಸೀಸ್ (ಪುಟ ಸಂಖ್ಯೆ:34) | 1349, 18/07/13 | 335.00 |
| 7 | ರಾಮ್‌ಶಿಖರ್ ಎಂಪೋರಿಯಂ (ಪುಟ ಸಂಖ್ಯೆ:35) | 275, -- | 560.00 |
| 8 | ಸ್ಟಾರ್ ಸೈಬರ್ ಸೆಂಟರ್ (ಪುಟ ಸಂಖ್ಯೆ:35) | 31, -- | 2310.00 |
| 9 | ಶರಣ್ ಫ್ಯಾಷನ್ಸ್ (ಪುಟ ಸಂಖ್ಯೆ:36) | 7315, 10/07/13 | 975.00 |
| 10 | ಇ-ಗ್ರಾಮ ಕೇಂದ್ರ (ಪುಟ ಸಂಖ್ಯೆ:36) | 176, -- | 4997.00 |
| 11 | -- (ಪುಟ ಸಂಖ್ಯೆ:37) | -- | 726.00 |
| 12 | ಕೃಷ್ಣ ಏಜೆನ್ಸೀಸ್ (ಪುಟ ಸಂಖ್ಯೆ:37) | 4858, 02/07/13 | 530.00 |
| 13 | ಕೃಷ್ಣ ಏಜೆನ್ಸೀಸ್ (ಪುಟ ಸಂಖ್ಯೆ:38) | 7037, 08/08/13 | 445.00 |
| 14 | ಕೃಷ್ಣ ಏಜೆನ್ಸೀಸ್ (ಪುಟ ಸಂಖ್ಯೆ:38) | 6884, 27/06/13 | 2882.00 |
| 15 | ಕೃಷ್ಣ ಏಜೆನ್ಸೀಸ್ (ಪುಟ ಸಂಖ್ಯೆ:38) | 6668, 04/07/13 | 193.00 |
| 16 | ಕೃಷ್ಣ ಏಜೆನ್ಸೀಸ್ (ಪುಟ ಸಂಖ್ಯೆ:39) | 6666, 04/07/13 | 980.00 |
| 17 | ಕೃಷ್ಣ ಏಜೆನ್ಸೀಸ್ (ಪುಟ ಸಂಖ್ಯೆ:39) | 6667, 04/07/13 | 960.00 |

812



| | | | |
|---|---|---|---|
| 18 | ಧನಲಕ್ಷ್ಮಿ ಹಾರ್ಡ್‌ವೇರ್ & ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:44) | 393, -- | 22200.00 |
| 19 | -"- (ಪುಟ ಸಂಖ್ಯೆ:45) | 387, -- | 6450.00 |
| 20 | -"- (ಪುಟ ಸಂಖ್ಯೆ:48) | 453, -- | 28400.00 |
| 21 | -"- (ಪುಟ ಸಂಖ್ಯೆ:51) | 483, -- | 22400.00 |
| 22 | -- (ಪುಟ ಸಂಖ್ಯೆ:57) | 57, 29/03/14 | 880.00 |
| 23 | -- (ಪುಟ ಸಂಖ್ಯೆ:58) | 14, 29/03/14 | 9000.00 |
| 24 | ಶ್ರೀ ಶ್ವೇತಾದ್ರಿ ಷಾಮಿಯಾನ (ಪುಟ ಸಂಖ್ಯೆ:59) | --, 22/02/14 | 2720.00 |
| 25 | -"- (ಪುಟ ಸಂಖ್ಯೆ:60) | --, 29/03/14 | 2670.00 |
| 26 | -- (ಪುಟ ಸಂಖ್ಯೆ:61) | -- | 1800.00 |
| 27 | -- (ಪುಟ ಸಂಖ್ಯೆ:63) | -- | 2700.00 |
| 28 | -- (ಪುಟ ಸಂಖ್ಯೆ:64) | -- | 10800.00 |
| 29 | ಶ್ರೀ ಶ್ವೇತಾದ್ರಿ ಷಾಮಿಯಾನ (ಪುಟ ಸಂಖ್ಯೆ:71 ರಿಂದ 73) | 329 ರಿಂದ 332 & 353 -- | 9370.00 |
| 30 | ಸ್ಟಾರ್ ಹೋಂ ಅಪ್ಲೈಯನ್ಸಸ್ (ಪುಟ ಸಂಖ್ಯೆ:75) | 92, 02/07/14 | 4560.00 |
| 31 | ಆಂದೋಲನ ದಿನ ಪತ್ರಿಕೆ (ಪುಟ ಸಂಖ್ಯೆ:77) | 439, 26/06/14 | 11000.00 |
| 32 | ಮೇಘ ಡಿಜಿಟಲ್ ಸ್ಟುಡಿಯೋ (ಪುಟ ಸಂಖ್ಯೆ:79) | 5989, 22/07/14<br>5900, 15/04/14 | 8500.00 |
| 33 | ಮೈಸೂರು ಜಿಲ್ಲಾ ಪತ್ರಕರ್ತರ ಸಂಘ (ಪುಟ ಸಂಖ್ಯೆ:87) | 33693, 27/03/14<br>34466, 30/4/14 | 160.00 |
| 34 | ಮುಂಗಲ್ ಫ್ಯಾನ್ಸಿ ಸ್ಟೋರ್ (ಪುಟ ಸಂಖ್ಯೆ:88) | 5894, 7/4/14 | 1115.00 |
| 35 | ದಿನೇಶ್ ಚಮ್ಮಳಗಿ(ಪುಟ ಸಂಖ್ಯೆ:90) | --, 02/05/14 | 10000.00 |
| 36 | ಸತೀಶ್.ಆರ್ (ಪುಟ ಸಂಖ್ಯೆ:91) | --, 02/05/14 | 5000.00 |
| 37 | ಓಂಕಾರ್ ಸೌಂಡ್ ಸಿಸ್ಟಂ (ಪುಟ ಸಂಖ್ಯೆ:92) | --, 01/05/14 | 8500.00 |
| 38 | ಶ್ರೀ ಪಾರ್ವತಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:99) | 935, 23/12/14 | 32621.00 |
| 39 | -"- (ಪುಟ ಸಂಖ್ಯೆ:101) | 1035, 30/01/15 | 21839.00 |
| 40 | -"- (ಪುಟ ಸಂಖ್ಯೆ:103) | 1181, 24/02/15 | 19602.00 |

mys/3088/15

813



| | | | |
|---|---|---|---|
| 41 | –”– (ಪುಟ ಸಂಖ್ಯೆ:106) | 76, 28/01/15 | 16555.00 |
| 42 | –”– (ಪುಟ ಸಂಖ್ಯೆ:108) | 186, 28/02/15 | 24846.00 |
| 43 | –”– (ಪುಟ ಸಂಖ್ಯೆ:110) | 193, 27/02/15 | 29197.00 |
| 44 | –”– (ಪುಟ ಸಂಖ್ಯೆ:149) | 1080, 29/01/15 | 25927.00 |
| 45 | –”– (ಪುಟ ಸಂಖ್ಯೆ:151) | 849, 29/11/15 | 33720.00 |
| 46 | ಧನಲಕ್ಷ್ಮಿ ಹಾರ್ಡ್‌ವೇರ್ & ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:159) | 314, 27/08/13 | 25265.00 |
| 47 | –”– (ಪುಟ ಸಂಖ್ಯೆ:161) | 342, 27/08/13 | 9875.00 |
| 48 | –”– (ಪುಟ ಸಂಖ್ಯೆ:164) | 329, 16/08/13 | 15740.00 |
| 49 | –”– (ಪುಟ ಸಂಖ್ಯೆ:166) | 336, 07/09/13 | 19340.00 |
| 50 | –”– (ಪುಟ ಸಂಖ್ಯೆ:169) | 48, 24/02/12 | 17260.00 |
| 51 | –”– (ಪುಟ ಸಂಖ್ಯೆ:171) | 49, 05/09/12 | 17443.00 |
| 52 | –”– (ಪುಟ ಸಂಖ್ಯೆ:175) | 404, 21/08/12 | 30911.00 |
| 53 | –”– (ಪುಟ ಸಂಖ್ಯೆ:177) | 348, 11/09/12 | 8664.00 |
| 54 | –”– (ಪುಟ ಸಂಖ್ಯೆ:181) | 808, 04/02/14 | 15010.00 |
| 55 | ಅಶೋಕ್ ಟೆಕ್ಸ್‌ಟೈಲ್ಸ್ (ಪುಟ ಸಂಖ್ಯೆ:184) | 11069, 25/2/14 | 34810.00 |
| 56 | ಧನಲಕ್ಷ್ಮಿ ಹಾರ್ಡ್‌ವೇರ್ & ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:186) | 350, 02/09/12 | 17230.00 |
| 57 | –”– (ಪುಟ ಸಂಖ್ಯೆ:188) | 343, 18/09/12 | 18280.00 |
| 58 | –”– (ಪುಟ ಸಂಖ್ಯೆ:191) | 157, 23/08/12 | 30810.00 |
| 59 | –”– (ಪುಟ ಸಂಖ್ಯೆ:193) | 358, 13/03/12 | 4710.00 |
| 60 | ಶ್ರೀ ಮಹದೇಶ್ವರ ಹಾರ್ಡ್‌ವೇರ್ & ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:196 ರಿಂದ 202) | 224, 230, 226, 268, 205, 264, 234, 278, 283, 275, 263, 262, 261 & 258 | 20042.00 |
| 61 | ಶ್ರೀ ಪಾರ್ವತಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:206) | 556, -- | 19951.00 |
| 62 | ಶ್ರೀ ಮಹದೇಶ್ವರ ಹಾರ್ಡ್‌ವೇರ್ & ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:211) | 203, -- | 20014.00 |
| 63 | ಶ್ರೀ ಪಾರ್ವತಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:214) | 579, 22/06/14 | 20630.00 |
| 64 | ಶ್ರೀ ಪಾರ್ವತಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:219) | 643, 17/09/14 | 13715.00 |

814



| | | | |
|---|---|---|---|
| 65 | –"– (ಪುಟ ಸಂಖ್ಯೆ:223) | 642, 17/09/14 | 8820.00 |
| 66 | –"– (ಪುಟ ಸಂಖ್ಯೆ:228) | 600, 03/02/14 | 20000.00 |
| 67 | ಶ್ರೀ ಮಹದೇಶ್ವರ ಹಾರ್ಡ್‌ವೇರ್ & ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:233) | 205, 21/02/14 | 20255.00 |
| 68 | ಶ್ರೀ ಪಾರ್ವತಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:236) | 597, 02/02/14 | 19715.00 |
| 69 | –"– (ಪುಟ ಸಂಖ್ಯೆ:269) | 186, 04/03/14 | 47558.00 |
| ಒಟ್ಟು ಮೊತ್ತ | | | 924652.00 |

i) ಕ್ರಮ ಸಂಖ್ಯೆ:1 ರಿಂದ 3 ಸೇರಿ ಚೆಕ್ ಸಂಖ್ಯೆ:183320ನ್ನು ಶ್ರೀ.ದೊಡ್ಡಯ್ಯ ಎಂಬುವವರ ಹೆಸರಿಗೆ ₹24,196/–ನ್ನು ನೀಡಿದ್ದು, ಸದರಿ ಖರ್ಚು ತಲಕಾಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೆ ಮತ್ತು ಕಾಲೇಜುಗಳಿಗೆ ಚಾಕ್‌ಲೇಟ್ ಬಾಬ್ತು ಮತ್ತು ಸದಸ್ಯರುಗಳಿಗೆ ಸಿಹಿ ಖರೀದಿಸಿದ ಬಾಬ್ತು ಎಂದು ಸಾದಿಲ್ವಾರು ಬಿಲ್ಲಿನಲ್ಲಿ ನಮೂದಿಸಿದೆ. ಸದರಿ ಖರ್ಚಿಗೆ The Karnataka Panchayath Raj (Gram Panchayaths Budgeting & Accounting) Rules, 2006ರ ನಿಯಮಗಳಡಿ ಅವಕಾಶವಿಲ್ಲ;

ii) ಕ್ರಮ ಸಂಖ್ಯೆ:4ರ ಖರ್ಚಿಗೆ ಸಂಬಂಧಿಸಿದಂತೆ, ಬೇರೆ ಬೇರೆ ಸಂಸ್ಥೆಗಳಿಂದ ಕೊಟೇಷನ್ ಕರೆದ ದಾಖಲೆಗಳಿಲ್ಲ;

iii) ಕ್ರಮ ಸಂಖ್ಯೆ:5 ರಿಂದ 17 ಖರ್ಚಿಗೆ ಸಂಬಂಧಿಸಿದಂತೆ ದಿ:02/06/16ರ ಸೆಲ್ಫ್ ಚೆಕ್ (ಸಂಖ್ಯೆ:895115) ಮುಖೇನ ಹಣ ಪಡೆದಿದೆ;

iv) ಕ್ರಮ ಸಂಖ್ಯೆ:18 ಮತ್ತು 19 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:05/08/14ರ ಒಂದೇ ಚೆಕ್ (ಸಂಖ್ಯೆ:183300) ಅನ್ನು ನೀಡಿದೆ. ಸದರಿ ಖರ್ಚಿಗೆ ಸಂಬಂಧಿಸಿದಂತೆ, ಬೇರೆ ಬೇರೆ ಸಂಸ್ಥೆಗಳಿಂದ ಕೊಟೇಷನ್ ಕರೆದ ದಾಖಲೆಗಳಿಲ್ಲ;

v) ಕ್ರಮ ಸಂಖ್ಯೆ:20 ಮತ್ತು 21 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:26/03/15ರ ಒಂದೇ ಚೆಕ್ (ಸಂಖ್ಯೆ:183350) ಅನ್ನು ನೀಡಿದೆ;

vi) ಕ್ರಮ ಸಂಖ್ಯೆ:22 ರಿಂದ 26 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:02/06/14ರ ಒಂದೇ ಚೆಕ್ (ಸಂಖ್ಯೆ:895114) ಅನ್ನು ಶ್ರೀ.ಜೆ.ಕುಮಾರ್ ರವರ ಹೆಸರಿಗೆ ನೀಡಿದೆ. ಕಾರಣ, ಸದರಿ ಖರ್ಚು ನಿಯಮಬಾಹಿರವಾಗಿದೆ;

vii) ಕ್ರಮ ಸಂಖ್ಯೆ:27 ಖರ್ಚು ಗ್ರಾಮ ಪಂಚಾಯತ್ ಅಧಿಕಾರಿ ವರ್ಗದವರಿಗೆ ಊಟ ಕೊಡಿಸಿದ ಬಾಬ್ತಾಗಿದೆ. ಸದರಿ ಖರ್ಚಿಗೆ ಅವಕಾಶವಿಲ್ಲದ್ದರಿಂದ ಖರ್ಚು ನಿಯಮಬಾಹಿರವಾಗಿದೆ;

viii) ಕ್ರಮ ಸಂಖ್ಯೆ:28 ಖರ್ಚು ಗ್ರಾಮ ಪಂಚಾಯತ್‌ನ ಧ್ವಜಾರೋಹಣದ ಬಾಬ್ತು ಆರು ಸಿಬ್ಬಂದಿಗಳಿಗೆ ನೀಡಿದೆ. ಸದರಿ ಖರ್ಚಿಗೆ ಅವಕಾಶವಿಲ್ಲದ್ದರಿಂದ ಖರ್ಚು ನಿಯಮಬಾಹಿರವಾಗಿದೆ;

ix) ಕ್ರಮ ಸಂಖ್ಯೆ:29 ಖರ್ಚು ಗ್ರಾಮ ಸಭೆಗೆ ಷಾಮಿಯಾನ ಹಾಕಿಸಿದ ಬಾಬ್ತು ಎಂದು ಹೇಳಿದೆ. ಸದರಿ ಬಿಲ್ಲುಗಳ ಒಟ್ಟು ಮೊತ್ತ ₹9,370/- ಆಗಿದೆ. ಸದರಿ ಬಿಲ್ಲುಗಳು ಪಂಚಾಯತ್ ಹೆಸರಿನಲ್ಲಿ ಇಲ್ಲ. ಸದರಿ ಬಿಲ್ಲುಗಳಲ್ಲಿರುವ ಸಂಸ್ಥೆಯ ಹೆಸರಿಗೆ ಚೆಕ್ ಅನ್ನು ನೀಡಿಲ್ಲ. ಆದರೆ, ಚೆಕ್ ಅನ್ನು ₹11,370/-ಗಳಿಗೆ ನೀಡಿದೆ. ಕಾರಣ, ಸದರಿ ಖರ್ಚು ನಿಯಮಬಾಹಿರವಾಗಿದೆ;

x) ಕ್ರಮ ಸಂಖ್ಯೆ:30 ಮತ್ತು 31ರ ಖರ್ಚುಗಳಿಗೆ ಸಂಬಂಧಿಸಿದಂತೆ, ಬೇರೆ ಬೇರೆ ಸಂಸ್ಥೆಗಳಿಂದ ಕೊಟೇಷನ್ ಕರೆದ ದಾಖಲೆಗಳಿಲ್ಲ;

xi) ಕ್ರಮ ಸಂಖ್ಯೆ:32 ಖರ್ಚು ವಿಡಿಯೋ ರೆಕಾರ್ಡಿಂಗ್ ಬಾಬ್ತು ಎಂದು ಹೇಳಿದೆ. ಸದರಿ ಖರ್ಚಿಗೆ ಪಂಚಾಯತ್ ಸಭೆಯಲ್ಲಿ ಅನುಮೋದನೆಗೊಂಡ ದಾಖಲೆಯಿಲ್ಲ;

xii) ಕ್ರಮ ಸಂಖ್ಯೆ:35 ಮತ್ತು 36ರ ಮೊತ್ತವನ್ನು ನಗದಾಗಿ ನೀಡಿರುವುದು ಕಂಡು ಬಂದಿದೆ;

xiii) ಕ್ರಮ ಸಂಖ್ಯೆ:38 ರಿಂದ 40 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:26/03/15ರ ಒಂದೇ ಚೆಕ್ (ಸಂಖ್ಯೆ:183346) ಅನ್ನು ನೀಡಿದೆ. ಸದರಿ ಬಿಲ್ಲುಗಳು ಪಂಚಾಯತ್ ಹೆಸರಿನಲ್ಲಿ ಇಲ್ಲ;

xiv) ಕ್ರಮ ಸಂಖ್ಯೆ:41 ರಿಂದ 43 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:26/03/15ರ ಒಂದೇ ಚೆಕ್ (ಸಂಖ್ಯೆ:183349) ಅನ್ನು ನೀಡಿದೆ. ಸದರಿ ಬಿಲ್ಲುಗಳು ಪಂಚಾಯತ್ ಹೆಸರಿನಲ್ಲಿ ಇಲ್ಲ.

xv) ಕ್ರಮ ಸಂಖ್ಯೆ:44 ಮತ್ತು 45 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:26/03/15ರ ಒಂದೇ ಚೆಕ್ (ಸಂಖ್ಯೆ:183348) ಅನ್ನು ನೀಡಿದೆ. ಸದರಿ ಬಿಲ್ಲುಗಳು ಪಂಚಾಯತ್ ಹೆಸರಿನಲ್ಲಿ ಇಲ್ಲ;

xvi) ಕ್ರಮ ಸಂಖ್ಯೆ:46 ಮತ್ತು 47 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:14/08/14ರ ಒಂದೇ ಚೆಕ್ (ಸಂಖ್ಯೆ:183312) ಅನ್ನು ನೀಡಿದೆ;

xvii) ಕ್ರಮ ಸಂಖ್ಯೆ:48 ಮತ್ತು 49 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:14/08/14ರ ಒಂದೇ ಚೆಕ್ (ಸಂಖ್ಯೆ:183306) ಅನ್ನು ನೀಡಿದೆ;

xviii) ಕ್ರಮ ಸಂಖ್ಯೆ:50 ಮತ್ತು 51 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:14/08/14ರ ಒಂದೇ ಚೆಕ್ (ಸಂಖ್ಯೆ:183313) ಅನ್ನು ನೀಡಿದೆ;

xix) ಕ್ರಮ ಸಂಖ್ಯೆ:52 ಮತ್ತು 53 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:14/08/14ರ ಒಂದೇ ಚೆಕ್ (ಸಂಖ್ಯೆ:183308) ಅನ್ನು ನೀಡಿದೆ;

xx) ಕ್ರಮ ಸಂಖ್ಯೆ:55ರ ಖರ್ಚಿಗೆ ಸಂಬಂಧಿಸಿದಂತೆ, ಬೇರೆ ಬೇರೆ ಸಂಸ್ಥೆಗಳಿಂದ ಕೊಟೇಷನ್ ಕರೆದ ದಾಖಲೆಗಳಿಲ್ಲ ಮತ್ತು ಸದರಿ ಬಿಲ್ಲು ಪಂಚಾಯತ್ ಹೆಸರಿನಲ್ಲಿ ಇಲ್ಲ;

xxi) ಕ್ರಮ ಸಂಖ್ಯೆ:56 ಮತ್ತು 57 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:14/08/14ರ ಒಂದೇ ಚೆಕ್ (ಸಂಖ್ಯೆ:183311) ಅನ್ನು ನೀಡಿದೆ;

816.



xxii) ಕ್ರಮ ಸಂಖ್ಯೆ:58 ಮತ್ತು 59 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:14/08/14ರ ಒಂದೇ ಚೆಕ್ (ಸಂಖ್ಯೆ:183310) ಅನ್ನು ನೀಡಿದೆ;

xxiii) ಕ್ರಮ ಸಂಖ್ಯೆ:60 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:26/08/14ರ ಒಂದೇ ಚೆಕ್ (ಸಂಖ್ಯೆ:183325) ಅನ್ನು ನೀಡಿದೆ;

xxiv) ಕ್ರಮ ಸಂಖ್ಯೆ:61 ಖರ್ಚಿಗೆ ಸಂಬಂಧಿಸಿದಂತೆ ಬಿಲ್ಲಿನ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ದಿನಾಂಕ:14/08/14ರ ಒಂದೇ ಚೆಕ್ (ಸಂಖ್ಯೆ:183318) ಅನ್ನು ನೀಡಿದೆ. ಸದರಿ ಬಿಲ್ಲು ಪಂಚಾಯತ್ ಹೆಸರಿನಲ್ಲಿ ಇಲ್ಲ;

xxv) ಕ್ರಮ ಸಂಖ್ಯೆ:63 ಖರ್ಚಿಗೆ ಸಂಬಂಧಿಸಿದಂತೆ ಸದರಿ ಬಿಲ್ಲು ಪಂಚಾಯತ್ ಹೆಸರಿನಲ್ಲಿ ಇಲ್ಲ;

xxvi) ಕ್ರಮ ಸಂಖ್ಯೆ:64 ಮತ್ತು 65 ಖರ್ಚಿಗೆ ಸಂಬಂಧಿಸಿದಂತೆ ದಿನಾಂಕ:14/08/14ರ ಒಂದೇ ಚೆಕ್ (ಸಂಖ್ಯೆ:183315) ಅನ್ನು ನೀಡಿದೆ. ಸದರಿ ಬಿಲ್ಲು ಪಂಚಾಯತ್ ಹೆಸರಿನಲ್ಲಿ ಇಲ್ಲ;

xxvii) ಕ್ರಮ ಸಂಖ್ಯೆ:66 ಖರ್ಚಿಗೆ ಸಂಬಂಧಿಸಿದಂತೆ ಬಿಲ್ಲು ಪಂಚಾಯತ್ ಹೆಸರಿನಲ್ಲಿ ಇಲ್ಲ. ಕ್ರಮ ಸಂಖ್ಯೆ:66 ಖರ್ಚಿಗೆ ಸಂಬಂಧಿಸಿದಂತೆ ಬಿಲ್ಲಿಗಿಂತ ಹೆಚ್ಚಿನ ಮೊತ್ತಕ್ಕೆ ದಿನಾಂಕ:04/09/14ರ ಒಂದೇ ಚೆಕ್ (ಸಂಖ್ಯೆ:183326) ಅನ್ನು ನೀಡಿದೆ ಮತ್ತು ಸದರಿ ಬಿಲ್ ಪಂಚಾಯತ್ ಹೆಸರಿನಲ್ಲಿ ಇಲ್ಲ;

xxviii) ಕ್ರಮ ಸಂಖ್ಯೆ:69 ಖರ್ಚಿಗೆ ಸಂಬಂಧಿಸಿದಂತೆ ಬಿಲ್ಲಿಗಿಂತ ಹೆಚ್ಚಿನ ಮೊತ್ತಕ್ಕೆ ದಿನಾಂಕ:04/08/14ರ ಒಂದೇ ಚೆಕ್ (ಸಂಖ್ಯೆ:183316) ಅನ್ನು ನೀಡಿದೆ;

xxix) ಶ್ರೀ ಪಾರ್ವತಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ ರವರಿಂದ ಸಿಎಫ್‌ಎಲ್ ಬಲ್ಬ್ ಖರೀದಿ ಬಾಬ್ತು ಚೆಕ್ ಸಂಖ್ಯೆ:183305 ದಿ:14/08/14ನ್ನು ₹3,93,874/– ಗಳಿಗೆ ನೀಡಿದ್ದು, ಸದರಿ ಖರೀದಿ ಬಿಲ್ಲುಗಳು [ಬಿಲ್ ಸಂಖ್ಯೆ:485, 491, 492, 493, 495, 528 & 531] ಪಂಚಾಯತ್ ಹೆಸರಿನಲ್ಲಿ ಇಲ್ಲ. ಕೆಲವೊಂದು ಬಿಲ್ಲುಗಳಲ್ಲಿ ದಿನಾಂಕ ನಮೂದಾಗಿಲ್ಲ. ಸದರಿ ಖರೀದಿಯು ₹1 ಲಕ್ಷ ಮೀರಿರುವುದರಿಂದ ಕೆಟಿಪಿಪಿ ಕಾಯಿದೆ ಅನ್ವಯ ಟೆಂಡರ್ ಕರೆದು ಸರಬರಾಜು ಆದೇಶ ನೀಡದೇ, ಕೇವಲ ದರಪಟ್ಟಿಗಳನ್ನು ಆಹ್ವಾನಿಸಿ, ಸರಬರಾಜುದಾರರಿಗೆ ಚೆಕ್ ಮುಖೇನ ಹಣವನ್ನು ಪಾವತಿ ಮಾಡಿರುವ ಕ್ರಮ ನಿಯಮಬಾಹಿರವಾಗಿದೆ.

xxx) ದಿನಾಂಕ:14/08/14ರ ಚೆಕ್ ಸಂಖ್ಯೆ:183317 ರಲ್ಲಿ ಮತ್ತು 01/10/14ರ ಚೆಕ್ ಸಂಖ್ಯೆ:151512 ಅನ್ನು ಬಿಲ್ಲಿನ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ಚೆಕ್ ನೀಡಿದೆ.

13) ಕೆಎಫ್‌ಸಿ ಪರಿಚ್ಛೇದ 57ರ ಪ್ರಕಾರ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕಿದೆ. ಅದೇ ರೀತಿ, ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳಲ್ಲಿ ಹೇಳಿದೆ. ₹5,000/– ಮೀರಿದ ₹1,00,000/–ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಕರೆಯತಕ್ಕದ್ದು. ಬ್ಯಾಂಕ್ ಲೆಕ್ಕ ತಃಖ್ತೆಯಲ್ಲಿ ಕಂಡು ಬರುವಂತೆ ಎಲ್ಲಾ ಚೆಕ್‌ಗಳು [ಸಿಬ್ಬಂದಿಗಳ ವೇತನ ಬಾಬ್ತು ಚೆಕ್ ಸಂಖ್ಯೆ:249029 ಅನ್ನು ಹೊರತುಪಡಿಸಿ] ₹1

MYS/3085/15

817



ಲಕ್ಷದೊಳಗಿದ್ದು, ಸದರಿ ಖರ್ಚುಗಳ ಪೈಕಿ ಕೆಲವೊಂದು ಖರ್ಚಿಗೆ ಸ್ಪರ್ಧಾತ್ಮಕ ಕೊಟೇಷನ್ ಪಡೆದು ಅತ್ಯಂತ ಕಡಿಮೆ ಧರ ನಮೂದಿಸಿರುವ ಗುತ್ತಿಗೆದಾರರಿಗೆ ಹಾಗೂ ಸರಬರಾಜುದಾರರಿಗೆ ಕಛೇರಿ ಆದೇಶ ನೀಡಿ ಚೆಕ್ ಮೂಲಕ ಹಣ ಪಾವತಿಸದೇ, ಸಂಸ್ಥೆಯ ಮತ್ತು ಸಾರ್ವಜನಿಕರ ಹೆಸರಿಗೆ ಚೆಕ್ ನೀಡಿರುವುದು ಕಂಡು ಬಂದಿದೆ. ಆದ್ದರಿಂದ, ಈ ರೀತಿ ಕೆಫ್‌ಸಿ ನಿಯಮ 57ನ್ನು ಉಲ್ಲಂಘನೆ ಮಾಡಿದೆ. ಮುಂದುವರೆದು, The Karnataka Panchayath Raj (Gram Panchayaths Budgeting & Accounting) Rules, 2006ರ ನಿಯಮ 43ರನ್ವಯ ಪ್ರತಿಯೊಂದು ಪಾವತಿಗೆ ಪೂರಕವಾಗಿ ಬಿಲ್ ಅಥವಾ ವೋಚರ್‌ಗಳನ್ನು ಹೊಂದಿರಬೇಕು. ಆದರೆ, ಸದರಿ ಪಾವತಿಗಳಿಗೆ ಸಂಬಂಧಿಸಿದ ಬಿಲ್ ಅಥವಾ ವೋಚರ್‌ಗಳಿಲ್ಲ. ಆದ್ದರಿಂದ, ಸದರಿ ಕಾಮಗಾರಿಗಳಲ್ಲಿ ಹಣ ದುರುಪಯೋಗವಾಗಿದೆಯೆಂದು ಹೇಳಲು ಮೇಲ್ನೋಟಕ್ಕೆ ಸಾಕಷ್ಟು ಅಂಶಗಳು ಕಂಡು ಬಂದಿದೆ. ಸದರಿ ಪಾವತಿಗಳಲ್ಲಿ 1 ಮತ್ತು 2ನೇ ಎದುರುದಾರರ ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿದೆ. ಸದರಿಯವರುಗಳು ಮೇಲಿನ ಉಪ ಖಂಡಿಕೆ–12ರಲ್ಲಿನ ಖರ್ಚಿನ ಪೈಕಿ ₹8,39,883/–ರ ದುರುಪಯೋಗದ ಮೊತ್ತಕ್ಕೆ ಜವಾಬ್ದಾರರಾಗಿದ್ದಾರೆ;

14) ಶಾಶ್ವತ ಕುಡಿಯುವ ನೀರಿನ ಯೋಜನೆ (ಸ್ವಜಲ ಧಾರೆ ಯೋಜನೆ) ಅಡಿ ತಲಕಾಡು ಗ್ರಾಮ ಪಂಚಾಯತ್‌ನಲ್ಲಿ 2014–15ನೇ ಸಾಲಿನಲ್ಲಿ ಅನುದಾನದ ಕ್ರಿಯಾ ಯೋಜನೆಯನ್ನು ರಚಿಸಿದ್ದು, ಸದರಿ ಕ್ರಿಯಾ ಯೋಜನೆಯನ್ನು ಟಿ.ನರಸೀಪುರ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದಿಸಿರುವುದು Booklet-3ರಲ್ಲಿ ಕಂಡು ಬಂದಿದೆ. ಸದರಿ ಕಾಮಗಾರಿಗಳೆಂದರೆ –

| ಕ್ರ.ಸಂ. | ಕಾಮಗಾರಿ | ಅಂದಾಜು ಮೊತ್ತ ₹ಗಳಲ್ಲಿ |
|---|---|---|
| 1 | ವಡೆಯಾಂಡ ಹಳ್ಳಿ ಗ್ರಾಮದ ಹೆಮ್ಮಿಗೆ ಮುಖ್ಯ ರಸ್ತೆಯಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸುವುದು | 1 ಲಕ್ಷ |
| 2 | 4ನೇ ಬ್ಲಾಕ್‌ನ ಮಸಣ ಕಾಳಮ್ಮನ ಬೀದಿಯಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸುವುದು | 1 ಲಕ್ಷ |
| 3 | 3ನೇ ಬ್ಲಾಕ್‌ನಲ್ಲಿ ಚಾಮನ ಮನೆಯಿಂದ ಅನ್ನ ಪೂರ್ಣೇಶ್ವರಿ ರೈಸ್‌ಮಿಲ್ ವರೆಗೆ ಹೊಸದಾಗಿ ಪೈಪ್‌ಲೈನ್ ಅಳವಡಿಸುವುದು | 1 ಲಕ್ಷ |
| 4 | 7ನೇ ಬ್ಲಾಕ್‌ನ ವೀರೇಶನ ಮನೆಯಿಂದ ಹಸ್ತಿಕೇರಿ ಮಠದವರೆಗೆ ಹೊಸದಾಗಿ ಪೈಪ್‌ಲೈನ್ ಅಳವಡಿಸುವುದು | 1 ಲಕ್ಷ |
| 5 | 1ನೇ ಬ್ಲಾಕ್ ಟಿ.ಜೆ.ಶ್ರೀನಿವಾಸ್ ರವರ ಮನೆಯಿಂದ ಅಬ್ಬಯ್ಯ ರವರ ಮನೆಯವರೆಗೆ ಹೊಸದಾಗಿ ಪೈಪ್‌ಲೈನ್ ಅಳವಡಿಸುವುದು | 1 ಲಕ್ಷ |
| 6 | 7ನೇ ಬ್ಲಾಕ್‌ನ ಹಳೇ ಬೀದಿಯ ಕಳ್ಳನಂಜನ ಮನೆಯಿಂದ ಮುಖ್ಯ ರಸ್ತೆಯವರೆಗೆ ಹೊಸದಾಗಿ ಪೈಪ್‌ಲೈನ್ ಅಳವಡಿಸುವುದು | 1 ಲಕ್ಷ |
| 7 | ಹಂದಿ ಜೋಗರ ಕಾಲೋನಿಯಲ್ಲಿ ಹೊಸದಾಗಿ | 1 ಲಕ್ಷ |

818



| | | |
|---|---|---|
| | ಪೈಪ್‌ಲೈನ್ ಅಳವಡಿಸುವುದು | |
| 8 | ಅರುಂಧತಿ ನಗರದಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸುವುದು | 1 ಲಕ್ಷ |
| 9 | ವಿನಾಯಕ ನಗರ ಮತ್ತು ಅಂಬೇಡ್ಕರ್ ಕಾಲೋನಿಯಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸುವುದು | 1 ಲಕ್ಷ |
| 10 | ಕುಡಿಯುವ ನೀರಿನ ಸೋರಿಕೆ ಕಾಮಗಾರಿ | 4 ಲಕ್ಷ |

15) ಸದರಿ ಎಲ್ಲಾ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಶ್ರೀ.ಟಿ.ವಿ.ರಮೇಶ್, 3ನೇ ದರ್ಜೆ ಗುತ್ತಿಗೆದಾರರಿಗೆ ನೀಡಿದೆಯೆಂದು ಮತ್ತು ಕ್ರಮ ಸಂಖ್ಯೆ-1 ರಿಂದ 9 ಕಾಮಗಾರಿಗಳನ್ನು 3ನೇ ಎದುರುದಾರರು ಗುತ್ತಿಗೆದಾರರಿಂದ ನಿರ್ವಹಿಸಿದ್ದಾರೆಂದು Booklet-3ರಲ್ಲಿನ ದಾಖಲೆಗಳಲ್ಲಿ ಕಂಡು ಬಂದಿದೆ. The Karnataka Panchayath Raj (Gram Panchayaths Budgeting & Accounting) Rules, 2006ರ ನಿಯಮ 83ರನ್ವಯ ಪಂಚಾಯತ್ ಕಾರ್ಯದರ್ಶಿಯು ನಮೂನೆ–36ರಲ್ಲಿ ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ನೀಡಿದ ದಾಖಲೆಗಳಿಲ್ಲ;

16) ಮೇಲಿನ ಉಪ ಖಂಡಿಕೆ–13ರ ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ–1 ರಿಂದ 5, 9 ಕಾಮಗಾರಿಗಳ ಬಿಲ್ಲುಗಳು Booklet-3ರ ಪುಟ ಸಂಖ್ಯೆ–6, 26, 49, 69, 92 ಮತ್ತು 151ರಲ್ಲಿ ಹಾಗೂ ಕ್ರಮ ಸಂಖ್ಯೆ–6, 8 ಕಾಮಗಾರಿಯ ಅಳತೆ ಪುಟ ಸಂಖ್ಯೆ–92 & 93, 136 & 137ಗಳಲ್ಲಿ ಸದರಿ ಕಾಮಗಾರಿಗಳನ್ನು ಗುತ್ತಿಗೆದಾರರಿಂದ 3ನೇ ಎದುರುದಾರರು ನಿರ್ವಹಿಸಿದ್ದಾರೆಂದು ಕಂಡು ಬಂದಿದೆ;

17) The Karnataka Panchayath Raj (Gram Panchayaths Budgeting & Accounting) Rules, 2006ರ ನಿಯಮ 85ರನ್ವಯ 3ನೇ ಎದುರುದಾರರು ಅಳತೆ ವಹಿಯನ್ನು ನಿರ್ವಹಿಸದೇ ಇರುವುದು ಕಂಡು ಬಂದಿದೆ. ಸದರಿ ನಿಯಮ 86ರನ್ವಯ ₹25,000/– ಕ್ಕಿಂತ ಮೇಲೆ ₹4 ಲಕ್ಷಕ್ಕಿಂತ ಕೆಳಗಿನ ಅಂದಾಜಿನ ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಪಡೆದುಕೊಳ್ಳುವ ಜವಾಬ್ದಾರಿ ಪಂಚಾಯತ್‌ನ ಅಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತ್‌ನ ಇಂಜಿನಿಯರಿಂಗ್ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರದ್ದಾಗಿದೆ. ಆದರೆ, 2ನೇ ಎದುರುದಾರರು ನಿಯಮ 86ರನ್ವಯ ಕಾಮಗಾರಿಗಳ ಚೆಕ್ ಮೆಷರ್‌ಮೆಂಟನ್ನು ಮಾಡಿದ ದಾಖಲೆಗಳಿಲ್ಲ;

18) ಬೇರೆ ಬೇರೆ ಸಂಸ್ಥೆಗಳಿಂದ ಸಾಮಗ್ರಿಗಳನ್ನು ಖರೀದಿ ಮಾಡಿದ ಬಾಬ್ತು ರಸೀದಿಗಳು Booklet-3ರಲ್ಲಿದ್ದು, ಸದರಿ ರಸೀದಿಗಳ ವಿವರ ಮತ್ತು ಮೊತ್ತ ಈ ಕೆಳಗಿನಂತಿದೆ –

| ಕ್ರ.ಸಂ. | ಸಂಸ್ಥೆಯ ಹೆಸರು | ಬಿಲ್ ಸಂಖ್ಯೆ & ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | ಶ್ರೀ ಮಹದೇಶ್ವರ ಹಾರ್ಡ್‌ವೇರ್ & ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:210) | 2, 07/01/15 | 17406.00 |
| 2 | ನ್ಯಾಷನಲ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:210) | -- | 17908.00 |

DMS/3085/15

(819)



| | | | |
|---|---|---|---|
| 3 | ಶ್ರೀ ಜಗದಾಂಭ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:211) | -- | 19594.00 |
| 4 | ಮಾತಾಜಿ ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:211) | -- | 20220.00 |
| 5 | ಧನಲಕ್ಷ್ಮಿ ಹಾರ್ಡ್‌ವೇರ್ & ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:217) | 41, -- | 18716.00 |
| 6 | ನಿರ್ಮಾ ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:218) | -- | 21396.00 |
| 7 | ಭಾರತಿ ಎಲೆಕ್ಟ್ರಿಕಲ್ಸ್ (ಪುಟ ಸಂಖ್ಯೆ:219) | -- | 18914.00 |
| 8 | ಜಯಸೂರ್ಯ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:225) | 884, -- | 16460.00 |
| 9 | ಶ್ರೀ ಶ್ರೀನಿವಾಸ ಅರ್ಥ್ ಮೂವರ್ಸ್ (ಪುಟ ಸಂಖ್ಯೆ:231) | 342, 24/06/14 | 2800.00 |
| 10 | ಶ್ರೀ ಲಕ್ಷ್ಮಿ ಮೋಟಾರ್ ರಿವೈಂಡಿಂಗ್ ವರ್ಕ್ಸ್ (ಪುಟ ಸಂಖ್ಯೆ:232) | 73, 02/07/14 | 3788.00 |
| 11 | ಶ್ರೀ ವೈಧ್ಯನಾಥೇಶ್ವರ ಮೋಟಾರ್ ರಿವೈಂಡಿಂಗ್ ವರ್ಕ್ಸ್ (ಪುಟ ಸಂಖ್ಯೆ:233) | 23, -- | 3928.00 |
| 12 | ಶ್ರೀ ಲಕ್ಷ್ಮಿ ಮೋಟಾರ್ ರಿವೈಂಡಿಂಗ್ ವರ್ಕ್ಸ್ (ಪುಟ ಸಂಖ್ಯೆ:235) | 64, 10/06/14 | 5102.00 |
| 13 | ಶ್ರೀ ವೈಧ್ಯನಾಥೇಶ್ವರ ಮೋಟಾರ್ ರಿವೈಂಡಿಂಗ್ ವರ್ಕ್ಸ್ (ಪುಟ ಸಂಖ್ಯೆ:236) | -- 10/06/11 | 5379.00 |
| 14 | ಪಾರ್ವತಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:252) | 501, 20/06/14 | 4309.00 |
| 15 | –"– | 502, 20/06/14 | 4689.00 |
| 16 | ಶ್ರೀ ಶ್ರೀನಿವಾಸ ಅರ್ಥ್ ಮೂವರ್ಸ್ (ಪುಟ ಸಂಖ್ಯೆ:253) | 340, 21/06/14 | 1300.00 |
| 17 | ಶ್ರೀ ಲಕ್ಷ್ಮಿ ಮೋಟಾರ್ ರಿವೈಂಡಿಂಗ್ ವರ್ಕ್ಸ್ (ಪುಟ ಸಂಖ್ಯೆ:254) | --, 25/06/14 | 4532.00 |
| 18 | ಜಯಸೂರ್ಯ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:259) | 883, -- | 25680.00 |
| 19 | –"– (ಪುಟ ಸಂಖ್ಯೆ:265) | 907, -- | 9560.00 |
| 20 | –"– (ಪುಟ ಸಂಖ್ಯೆ:272) | 908, -- | 9360.00 |

820



| | | | |
|---|---|---|---|
| 21 | –"– (ಪುಟ ಸಂಖ್ಯೆ:277) | 885, 05/10/14 | 16880.00 |
| 22 | ಶ್ರೀ ಶ್ರೀನಿವಾಸ ಅರ್ಥ್ ಮೂವರ್ಸ್ (ಪುಟ ಸಂಖ್ಯೆ:282) | 350, 22/06/14 | 4000.00 |
| 23 | ಪಾರ್ವತಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:282) | --, 05/07/14 | 11631.00 |
| 24 | ಜಯಸೂರ್ಯ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ (ಪುಟ ಸಂಖ್ಯೆ:288) | 909, -- | 10220.00 |
| | ಒಟ್ಟು ಮೊತ್ತ | | 2,73,772.00 |

ಕೆಲವೊಂದು ರಸೀದಿಗಳಲ್ಲಿ ದಿನಾಂಕ ಮತ್ತು ಕೆಲವೊಂದರಲ್ಲಿ ರಸೀದಿ ಸಂಖ್ಯೆ ನಮೂದಾಗಿಲ್ಲ. ಆಯಾಯ ರಸೀದಿಗಳಿಗೆ ಸಂಬಂಧಿಸಿದಂತೆ, ಪ್ರತ್ಯೇಕ ಚೆಕ್ ಅನ್ನು ನೀಡಿಲ್ಲ. ಕೆಲವೊಂದು ಖರೀದಿಗಳಲ್ಲಿ ಸ್ಪರ್ಧಾತ್ಮಕ ಕೊಟೇಷನ್‌ಗಳನ್ನು ಕರೆಯದೇ ಇರುವುದು ಕಂಡು ಬಂದಿದೆ. ಸದರಿ ಬಿಲ್ಲುಗಳಿಗೆ 1 ಮತ್ತು 2ನೇ ಎದುರುದಾರರು ಅನುಮೋದಿಸಿ ಸಹಿ ಮಾಡಿರುವುದು ಕಂಡು ಬಂದಿದೆ. ಸ್ವಜಲಧಾರಾ ಯೋಜನೆಯ ಖಾತೆಯಿಂದ ಹಣವನ್ನು ವ್ಯಯಿಸಿ ದುರುಪಯೋಗ ಪಡಿಸಿಕೊಂಡಿದೆಯೆಂಬ ಆಪಾದನೆಯು ಮೇಲ್ನೋಟಕ್ಕೆ ಸಾಬೀತಾಗಿದೆ;

19) Booklet-3ರಲ್ಲಿನ ದಾಖಲೆಗಳ ಪೈಕಿ ಕೆಲವೊಂದು ಕಾಮಗಾರಿಗಳನ್ನು (ಕಾಮಗಾರಿಯ ಹೆಸರಿನ ಉಲ್ಲೇಖವಿಲ್ಲ) ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ನಿರ್ವಹಿಸಿದೆಯೆಂಬಂತೆ ಹಾಜರಾತಿ ವಹಿ ಮತ್ತು ಕೂಲಿಗಾರರಿಗೆ ಹಣ ಸಂದಾಯ ಮಾಡಿರುವಂತೆ ದಾಖಲೆಗಳು ಕಂಡು ಬಂದಿದೆ. ಕೂಲಿಗಾರರಿಗೆ ₹27,000/–, ₹6,000/–, ₹6,970/–, ₹7,140/–, ₹9,000/–, ₹6,000/–, ₹4,000/–, ₹10,370/–, ₹9,000/–, ₹18,000/–, ₹8,000/–, ₹8,840/– ಮತ್ತು ₹9,000/– (ಕ್ರಮವಾಗಿ, ಪುಟ ಸಂಖ್ಯೆ–221 ರಿಂದ 223, 229, 238, 239, 242, 243, 250, 257, 263, 269 ರಿಂದ 270, 280, 286, 292)ಗಳನ್ನು ಪಾವತಿಸಿದೆ. ಸದರಿ ಕಾಮಗಾರಿಗಳನ್ನು ಯೋಜನೆಯ ಮಾರ್ಗಸೂಚಿಗಳನ್ವಯ ಕಾರ್ಮಿಕರಿಂದ ನಿರ್ವಹಿಸಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಕಾರ್ಮಿಕರು ಕಾಮಗಾರಿಗಳನ್ನು ನಿರ್ವಹಿಸಿ ಕೂಲಿ ಹಣ ಅವರ ಖಾತೆಗೆ ಜಮಾ ಆದ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಕಾಮಗಾರಿಗಳನ್ನು ನಿರ್ವಹಿಸಿದ ಕಾರ್ಮಿಕರು ಜಾಬ್ ಕಾರ್ಡ್ ಹೊಂದಿರುವ ಬಗ್ಗೆ ಸದರಿ ಜಾಬ್ ಕಾರ್ಡ್ ಪ್ರತಿಗಳಿಲ್ಲ. ಸದರಿ ಕಾಮಗಾರಿ ನಿರ್ವಹಿಸಿದ ಕಾರ್ಮಿಕರು ಉದ್ಯೋಗ ಕೋರಿ ಎದುರುದಾರರಿಗೆ ಅರ್ಜಿ ಸಲ್ಲಿಸಿದ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಕಾರ್ಮಿಕರು ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಬಗ್ಗೆ ಪಾಸ್ ಪುಸ್ತಕ ಅಥವಾ ಖಾತೆಯ ಉದ್ಧೃತ ಭಾಗವು ಲಭ್ಯವಿಲ್ಲ. ಕಾರಣ, ಸದರಿ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ;

20) 2014–15ನೇ ಸಾಲಿನ ಬಸವ ವಸತಿ ಯೋಜನೆ ಅಡಿ ಆಯ್ಕೆ ಮಾಡಿದ ಫಲಾನುಭವಿಗಳ ಪಟ್ಟಿಯನ್ನು ದಿನಾಂಕ:22/07/14ರ ಪಂಚಾಯತ್ ಗ್ರಾಮ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿದ್ದು, ಸದರಿ ಆಯ್ಕೆ ಪಟ್ಟಿಯಲ್ಲಿ 101 ಫಲಾನುಭವಿಗಳಿದ್ದು, ಅವರ ಪೈಕಿ 100 ಫಲಾನುಭವಿಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಅನುಮೋದಿಸಿರುವುದು ಕಂಡು ಬಂದಿದೆ. ಸದರಿ ಫಲಾನುಭವಿಗಳಿಗೆ ವಸತಿ ನಿಗಮದಿಂದ ಹಣ ಬಿಡುಗಡೆಯಾಗಿರುವುದು Booklet-4ರಲ್ಲಿ ಕಂಡು ಬಂದಿದೆ. ಸದರಿ

mys/3085/15
(821)



ಫಲಾನುಭವಿಗಳಿಗೆ ಹಂತವಾರು ಹಣ ಬಿಡುಗಡೆಯಾದ ಬಗ್ಗೆ ಮತ್ತು ಮನೆಯ ಪ್ರತಿ ಹಂತದ ಜಿಪಿಎಸ್ ಮಾಡಿದ ದಾಖಲೆಗಳಿಲ್ಲ;

21) ಮೇಲೆ ಹೇಳಿದ ಕಾರಣಗಳಿಗಾಗಿ ದೂರಿನ ಆಪಾದನೆಗಳು ಸಾಬೀತಾಗಿದ್ದು, ಎಲ್ಲಾ ಎದುರುದಾರರುಗಳ ಕರ್ತವ್ಯ ಲೋಪ ಮತ್ತು ದುರ್ನಡತೆಗೆ ರೀತಿಯಲ್ಲಿ ತಯಾರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಕಾರಣ, ಎದುರುದಾರರುಗಳ ದುರ್ನಡತೆ ಮೇಲ್ನೋಟಕ್ಕೆ ಸಾಬೀತಾಗಿದೆ.

11. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ರಿಂದ 5ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

12. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 5ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಎರಡನೇ (2ನೇ) ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸದರಿಯವರಿಂದ ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶಿಸಿದೆ.

14. ಅದಲ್ಲದೆ, 1 ಮತ್ತು 3 ರಿಂದ 5ನೇ ಎದುರುದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1 ಮತ್ತು 3 ರಿಂದ 5ನೇ ಎದುರುದಾರರುಗಳ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

15. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.